**ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ದಾವಾಸ್ವತ್ತುನ್ನು ವಾದಿಯು ಟಿ ಮಲ್ಲಪ್ಪ ರವರ ಹೆಂಡತಿಯವರಿಂದ ದಿ.04.11.1988 ರಲ್ಲಿ ಖರೀದಿಮಾಡಿರುತ್ತಾರೆ. ಖರೀದಿ ಮಾಡಿರುವ ಸ್ವತ್ತಿನ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ 3 ಅಡಿ ನಂತರ ಟಿ ವಿ ವಿಶ್ವನಾಥ ಮತ್ತು ಟಿ ವಿ ರವಿ ರವರ ಸ್ವತ್ತು, ಉತ್ತರಕ್ಕೆ ಃ ಟಿ ವಿ ವಿಶ್ವನಾಥ ಮತ್ತು ಟಿ ವಿ ರವಿ ರವರ ಸ್ವತ್ತು, ದಕ್ಷಿಣಕ್ಕೆಃ ಈಗ ವಿರೇಗೌಡರ ಸ್ವತ್ತು ಮೊದಲು ಪ್ರಸನ್ನರವರ ಸ್ವತ್ತು. ವಿರೇಗೌಡರ ಸ್ವತ್ತಿಗೆ ಸಂಬಂಧಿಸಿದಂತೆ ದಾವಾ ಸಂಖ್ಯೆ 44/2021 ರಲ್ಲಿ ದಾವೆ ನಡೆಯುತ್ತಿರುತ್ತದೆ ಎಂದರೆ ಸರಿ. ದಾವಾಸ್ವತ್ತು ಮತ್ತು ಪಶ್ಚಿಮಕ್ಕೆ ಇರುವ ವಿಶ್ವನಾಥರವರ ಸ್ವತ್ತು. ದಿ.18.03.1954 ರಲ್ಲಿ ಮಲ್ಲಪ್ಪರವರಿಂದ ಪುಟ್ಟಚೌಡಮ್ಮನವರಿಗೆ ಕ್ರಯವಾಗಿರುತ್ತದೆ ಎಂದರೆ ಸರಿ. ಅದರ ವಿಸ್ತೀರ್ಣವು ಪೂರ್ವ-ಪಶ್ಚಿಮ 160 ಅಡಿ ಹಾಗೂ ಉತ್ತರ-ದಕ್ಷಿಣ 75 ಅಡಿ ಆಗಿರುತ್ತದೆ. ಖರೀದಿಸಿರುವ ಸ್ವತ್ತಿನಲ್ಲಿ ಸರ್ವೇ ನಂ.122/1 ಮತ್ತು 58/1 ಒಳಗೊಂಡಿರುತ್ತದೆ ಎಂದರೆ ಸರಿ. ದಾವಾಸ್ವತ್ತು ಕೇವಲ ಸರ್ವೇ ನಂ.58/1 ಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಸರ್ವೇ ನಂ.122/1, 122/2 ಮತ್ತು 58/1 ರ ಜಾಗವು ಮಲ್ಲಪ್ಪ ಮತ್ತು ಚಿಕ್ಕಣ್ಣ ಮತ್ತು ಸುಬ್ಬರಾಯಪ್ಪ ಎಂಬುವವರು ಖರೀದಿ ಮಾಡಿರುತ್ತಾರೆಂದರೆ ಸರಿ. ಖರೀದಿಸಿದ ಸ್ವತ್ತುಗಳಲ್ಲಿ ಸರ್ವೇ ನಂ.122/1 10 ½ ಗುಂಟೆ, ಸರ್ವೇ ನಂ.122/2 ರಲ್ಲಿ 10 ½ ಗುಂಟೆ ಹಾಗೂ ಸರ್ವೇ ನಂ.58/1 ರಲ್ಲಿ ಪೂರ್ವ-ಪಶ್ಚಿಮ 20 ಗಜ ಮತ್ತು ಉತ್ತರ-ದಕ್ಷಿಣ 100 ಗಜ ಆಗಿರುತ್ತದೆಂದರೆ ಸರಿ. ಖರೀದಿಸಿದ ಸ್ವತ್ತುಗಳನ್ನು ಸರ್ವೇ ನಂ.58/1 ತಿಗಳೆ ಭಾಗ ಆಯಿತು ಹಾಗೂ ಸರ್ವೇ ನಂ.122/1 ಮತ್ತು 122/2 ಖಾಸಬಾಗ ಸೇರಿದ ಸ್ವತ್ತಗಳಾಗಿರುತ್ತವೆ ಹಾಗೂ ಅವು ಕಂದಕಗಳಾಗಿದ್ದವು ಎಂದರೆ ಸರಿ.

1938 ರಲ್ಲಿ ಸುಬ್ಬರಾಯಪ್ಪ ರವರು ಬಿಡುಗಡೆಗೊಂಡು ಹೊರೆಗೆ ಹೋಗಿರುತ್ತಾರೆ. ಮಲ್ಲಪ್ಪ ಮತ್ತು ಚಿಕ್ಕಣ್ಣ ರವರು ದಿ.15.03.1954 ರಲ್ಲಿ ಖರೀದಿಸಿದ ಸ್ವತ್ತುಗಳನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ನೊಂದಾಯಿತ ವಿಭಾಗದ ಪತ್ರದ ದೃಡೀಕೃತ ಪತ್ರವಾಗಿದ್ದು ಸದರಿ ಪತ್ರದಲ್ಲಿರುವ ನಕ್ಷೆಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ನಕ್ಷೆಯಲ್ಲಿರುವ

ಅಳತೆಗಳು ಸರಿಯಾಗಿರುತ್ತದೆ. ಆ ನಕ್ಷೆಯ ಪ್ರಕಾರ ವಿಭಾಗ ಮಾಡಿಕೊಂಡಿರುತ್ತೇವೆ ಹಾಗೂ ನಾವು ಸ್ವಾಧೀನದಲ್ಲಿ ಇರುತ್ತೇವೆ.

ವಾದಿ ದಾವಾಸ್ವತ್ತನ್ನು ಖರೀದಿ ಮಾಡಿದ ನಂತರ ಅದರಲ್ಲಿ ಅಂಗಡಿಗಳನ್ನು ಹಾಕಿಕೊಂಡಿರುತ್ತಾರೆಂದರೆ ಸರಿ. 1988 ರಲ್ಲಿ ಅಂಗಡಿಗಳನ್ನು ಕಟ್ಟಿ ಆಗಿನಿಂದ ಸ್ವಾದೀನದಲ್ಲಿರುತ್ತಾರೆ. ಅಂಗಡಿಗಳನ್ನು ಸಂಪೂರ್ಣವಾಗಿ ಕಟ್ಟಿದ ನಂತರ ನಗರಸಭೆಯಿಂದ ಕಟ್ಟಡ ಸಂಪೂರ್ಣವಾಗಿರುವ ಬಗ್ಗೆ ಮುನ್ಸಿಪಾಲಿಟಿರವರಿಗೆ ತಿಳಿಸಿ ಅವರಿಂದ ಕಟ್ಟಡ ಸಂಪೂರ್ಣವಾದ ಬಗ್ಗೆ ಪತ್ರವನ್ನು ತೆಗೆದುಕೊಂಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಹಾಗೂ ದಾಖಲೆಗಳು ಹಾಜರುಪಡಿಸಿರುವುದಿಲ್ಲ.

ನಾನು ಸ್ವಾಧೀನದಲ್ಲಿರುವ ಸ್ವತ್ತಿಗೆ ಸರ್ಕಾರದವರು ರಸ್ತೆ ಮಾಡಲು ಭೂಮಿಯನ್ನು ಒತ್ತುವರಿ ಮಾಡಿರುತ್ತಾರೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**